ಲೋಕೋಪಯೋಗಿ ಇಲಾಖೆಯಂ ಗ್ಯಾಂಗ್‌ಮನ್ ಕೂಲಿಗಾರರ ಸೇವೆ ಗಳನ್ನು ಖಾಯಂಗೊಳಿಸುವ ಬಗ್ಗೆ.

(೯೫೮) ಶ್ರೀ ರಂಕ್ಯಯ್ಯ ಪೂಜಾರಿ (ವಿಟ್ಲ) ಮಾನ್ಯ ಲೋಕೋಪಯೋಗಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಗ್ಯಾಂಗ್‌ಮನ್‌ಗಳಿಗೆ ನೀಡುತ್ತಿರುವ ದಿನಗೂಲಿ ಎಷ್ಟು

ಆ) ದಿನಗೂಲಿಯ ಮೇಲೆ ಕೆಲಸ ಮಾಡುತ್ತಿರುವಷ್ಟು ಸಮಯ ಅವರ ಸೇವೆಗೆ ಭದ್ರತೆಯಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರವು ಅವರ ಸೇವೆಗಳನ್ನು ಖಾಯಂಗೊಳಿಸಲು ತಕ್ಕ ಕ್ರಮವನ್ನು ಕೈಕೊಂಡಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ. (ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು).—

ಅ) ದಿನವೊಂದಕ್ಕೆ ಸರಾಸರಿ ರೂ. ೯-೪೦ ಪೈಸೆ ಕೂಲಿ ಕೊಡಲಾಗುತ್ತದೆ.

ಆ) ಹೌದು.

ಇ) ಆರಿಸಿಕೊಳ್ಳಲು ತಕ್ಕುದಾದ ಹಲವು ಅರ್ಹತಾ ಯೋಗ್ಯತೆಯನ್ನು ಹೊಂದಿರುವ ೧೦,೬೬೦ ಗ್ಯಾಂಗ್‌ಮನ್/ಗ್ಯಾಂಗ್ ಕೂಲಿಗಳನ್ನು ಇತ್ತೀಚೆಗೆ ನಿರ್ಮಿಸಲಾದ ಮಾಸಗೂಲಿ ಸ್ಥಾಪನೆಗೆ ಸೇರಿಸಿಕೊಳ್ಳಬೇಕಾಗಿದೆ. ಉಳಿದ ಆರಿಸಿಕೊಳ್ಳುವ ಅರ್ಹತಾ ಯೋಗ್ಯವುಳ್ಳ ಗ್ಯಾಂಗ್‌ಮೆನ್‌ಗಳು ಇದ್ದ ಪಕ್ಷದಲ್ಲಿ ಅವರನ್ನು ಮಾಸಗೂಲಿ ಸ್ಥಾಪನೆಯ ಹುದ್ದೆಗಳು ಖಾಲಿ ಬೀಳುತ್ತಿರುವಾಗ ಅವುಗಳಲ್ಲಿ ಸೇರಿಸಿಕೊಳ್ಳಲಾಗುವುದು.

ಶ್ರೀ ಧನಂಜಯಕುಮಾರ್.—ಮಾನ್ಯ ಅಧ್ಯಕ್ಷರೇ ತಮ್ಮ ಇಲಾಖೆಯಲ್ಲಿ ಸುಮಾರು ೧೦.೬೬೦ ಜನರನ್ನು ಕನ್‌ಸಾಲಿಡೇಟೆಡ್ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದೀರಿ. ಇವರನ್ನು ಕಾಯಂ ಮಾಡುವ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಅಥವಾ ಇವರಿಗೆ ಹೆಚ್ಚು ಸಂಬಳ ಸಾರಿಗೆಗಳನ್ನು ಕೊಡಲು ಏನಾದರೂ ನಿರ್ಧಾರ ಮಾಡಿದ್ದೀರಾ? ಇವರನ್ನು ನೇಮಕ ಮಾಡಿಕೊಳ್ಳಲು ಯಾವ ಯಾವ ಅರ್ಹತೆಯನ್ನು ಇಟ್ಟುಕೊಂಡಿದ್ದೀರಿ. ಅಥವಾ ಮುಂದೆ ಇವರನ್ನು ನೇಮಕ ಮಾಡಲು ಸಮಿತಿಗಳನ್ನು ಏನಾದರೂ ರಚನೆ ಮಾಡುತ್ತೀರೋ ಎನ್ನುವ ಬಗ್ಗೆ ತಿಳಿಸಬೇಕು?

ಶ್ರೀ ಹೆಚ್.ಡಿ. ದೇವೇಗೌಡ.—ತಿಂಗಳಿಗೆ ಮುನ್ನೂರು ರೂಪಾಯಿಂಗಳ ಕನ್‌ಸಾಲಿಡೇಟೆಡ್ ಸಂಬಳ ಪಡೆಯತಕ್ಕವರು ೧೦ ಸಾವಿರದ ೬೬೦ ಜನರು ಇದ್ದಾರೆ. ೧೦ ಸಾವಿರದ ೬೬೦ ಹುದ್ದೆಗಳಿಗೆ ಸರ್ಕಾರದಿಂದ ಇವತ್ತು ಮಂಜೂರಾತಿ ಕೊಡುತ್ತಿದ್ದೇವೆ. ಗ್ಯಾಂಗ್ ಕೂಲೀಸ್ ೧೬ ಸಾವಿರ ಜನ ಇದ್ದಾರೆ. ರೋಡ್ ಲೆನ್ತ್ ಎಷ್ಟು ಇದೆ. ಎಷ್ಟು ಜನ ಗ್ಯಾಂಗ್ ಕಬಾಲೀಸ್ ಇಡಬೇಕು, ಎಷ್ಟು ಜನರಿಗೆ ಖಾಯಂ ಮಾಡಬೇಕು ಅದನ್ನೆಲ್ಲಾ ನೋಡಿಕೊಂಡು ಈಗ ಯಾರೂ ೨೪೦ ದಿವಸಗಳ ಮೇಲೆ ಬಂದ್ಕೆ ಬ್ರೇಕ್ ಇಲ್ಲದೆ ಕೆಲಸ ಮಾಡಿದ್ದಾರೆ ಅಂತಹವರನ್ನು ಪೆಡ್ಯೂಲ್ಡ್ ಕ್ಯಾಸ್ಟ್ ಜನರನ್ನು ಒಂದೇ ಸಾರಿ ಕನ್‌ಫರ್ಮ್ ಮಾಡತಕ್ಕ ಕೆಲಸ ಮಾಡಿದ್ದೇವೆ. ಪೆಡ್ಯೂಲ್ಡ್ ಕ್ಯಾಸ್ಟ್ ಬಿಟ್ಟು ಬೇರೆಯವರು ಯಾರಿದ್ದಾರೆ ಅವರು ಕನಿಷ್ಟಪಕ್ಷ ೫ವರ್ಷ ಕೆಲಸಮಾಡಿರತಕ್ಕವರು ೧೦ ವರ್ಷ ಕೆಲಸ ಮಾಡಿರತಕ್ಕವರು ಅಂತಹವರನ್ನೆಲ್ಲಾ ಸೀನಿಯಾರಿಟಿ ಮೇಲೆ ಖಾಯಂ ಮಾಡಲಾಗುತ್ತದೆ. ಕೆಲವರು ೫೫ ವರ್ಷಗಳು ಆದಮೇಲೆ ನಿವೃತ್ತಿ ಹೊಂದುತ್ತಾರೆ. ಅವರ ಜಾಗದಲ್ಲಿಯೂ ಸಹ ಭರ್ತಿ ಮಾಡುತ್ತೇವೆ.

ಶ್ರೀ ಪಿ. ಧನಂಜಯ ಕುಮಾರ್.—ಮಾನ್ಯ ಮಂತ್ರಿಗಳು ಇಲಾಖೆಯ ಮೇಲಿನ ಚರ್ಚೆಯ ಮೇಲೆ ಉತ್ತರ ಕೊಡುವಾಗ ಎಲ್ಲಾ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಈಗ ೧೦ ಸಾವಿರದ ೬೬೦ ಜನರನ್ನು ಖಾಯಂ ಮಾಡುತ್ತಿದ್ದಾರೆ. ಇನ್ನುಳಿದ ೬ ಸಾವಿರ ಗ್ಯಾಂಗ್ ಕೂಲೀಸ್ ಏನಿದ್ದಾರೆ ಅವರನ್ನು ಸಹ ಖಾಯಂ ಮಾಡುವುದಕ್ಕೆ ಸರ್ಕಾರ ಆದೇಶ ಹೊರಡಿಸಂತ್ತದೆಯೇ ಎಂದು ನಾನು ಕೇಳುತ್ತಿದ್ದೇನೆ.

SRI H.D. DEVEGOWDA.—As and when we require their servicls we will increase the sanctioned posts. But I cannot give an assurance in that behalf. It depends upon the road lengh. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮಂತ್ರಿಗಳು ೨೪೦ ದಿವಸ ಬ್ರೇಕ್ ಇಲ್ಲದೆ ಕೆಲಸ ಮಾಡಿರತಕ್ಕವರನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು.—೨೪೦ ದಿವಸ ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮಾತ್ರ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾರೂ ೨೪೦ ದಿವಸ ಒಂದೇ ಸಮ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲ. ೩೦ ದಿವಸಗಳಲ್ಲಿ ೧ ದಿವಸ ಕಡಿಮೆ ಮಾಡಿ ಕೆಲಸಕ್ಕೆ ತೆಗೆದುಕೊಳ್ಳತಕ್ಕ ಪದ್ಧತಿ ಇದೆ. ೨೪೦ ದಿವಸ ಆಗಿರಬೇಕೆಂದು ಹೇಳುತ್ತೀರಿ, ೨೪೦ ದಿವಸ ಆಗಬೇಕಾದರೆ ಯಾವರೀತಿ ಲೆಕ್ಕ ಹಾಕುತ್ತೀರಿ ತಿಂಗಳಲ್ಲಿ ಒಂದು ದಿವಸ ಬಿಡುವುದನ್ನು ಬಿಟ್ಟು ಲೆಕ್ಕ ಹಾಕುತ್ತೀರಾ? ಯಾವರೀತಿ ಲೆಕ್ಕಾಚಾರ ಮಾಡುತ್ತೀರಿ?

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಐಡೆಂಟಿಫೈ ಮಾಡಿರತಕ್ಕದ್ದು ಯಾರು ೨೪೦ ದಿವಸ ಕೆಲಸ ಮಾಡಿದ್ದಾರೆ ಅಂತಹವರನ್ನು ಖಾಯಂ ಮಾಡತಕ್ಕ ತೀರ್ಮಾನ ತೆಗೆದುಕೊಂಡಿದ್ದೇವೆ. ಆ ಕೆಲಸ ಎಲ್ಲಿಯವರೆಗೆ ಹೋಗಿದೆ ಎಂದರೆ ತಿಂಗಳ ಸಂಬಳದ ಮೇಲೆ ಕೆಲಸಮಾಡತಕ್ಕವರು ೧೯೭೦ನೇ ಇಸವಿಯಿಂದ ಕೆಲಸ ಮಾಡಿದ್ದಾರೆ. ೧೯೭೮ನೇ ಇಸವಿಯಿಂದ ಕೆಲಸ ಮಾಡಿದ್ದಾರೆ ಅವರನ್ನೆಲ್ಲಾ ಖಾಯಂ ಮಾಡುವುದಕ್ಕೆ ಕೊನೆಯ ಹಂತ ಯಾವುದು ಎಂದು ಗೊತ್ತಾಗುವುದಿಲ್ಲ. ೧೬ ಸಾವಿರದ ೬೬೦ ಜನರಲ್ಲಿ ಯಾರು ೨೪೦ ದಿವಸ ಕೆಲಸಮಾಡಿದ್ದಾರೆ ಅವರನ್ನು ಐಡೆಂಟಿಫೈ ಮಾಡಿದ್ದೇವೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳಿದ್ದಾರೆ. ಬೇರೆ ಬೇರೆ ಇಲಾಖೆಗಳಲ್ಲಿ ಕನ್‌ಸಾಲಿಡೇಟೆಡ್ ತಿಂಗಳ ಸಂಬಳದ ಮೇಲೆ ಕೆಲಸಮಾಡುತ್ತಿದ್ದಾರೆ ಅವರನ್ನು ಖಾಯಂ ಮಾಡುತ್ತೀರಾ ?

ಅಧ್ಯಕ್ಷರು.—ಎಲ್ಲಾ ಇಲಾಖೆಗಳ ಬಗ್ಗೆ ಲೋಕೋಪಯೋಗಿ ಸಚಿವರು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ

ಶ್ರೀ ಎಸ್. ಸೂರ್ಯನಾರಾಯಣರಾವ್ —ಈಗ ಕಾಯಂ ಮಾಡತಕ್ಕವರಿಗೆ ಸರ್ಕಾರಿ ನೌಕರರಿಗೆ ಏನೇನು ಸೌಲಭ್ಯಗಳು ಸಿಗುತ್ತಿವೆ ಅವುಗಳೆಲ್ಲಾ ದೊರೆಯುವಂತೆ ಮಾಡುತ್ತೀರಾ ?

SRI H.D. DEVEGOWDA.—Sri, with your permisson I would like to answer the point raised by honble member Suryanarayane Rao ನಾನು ಇಷ್ಟು ಮಾತ್ರ ಹೇಳುತ್ತೇನೆ, ಅದರ ಬಗ್ಗೆ ಒಂದು ಸ್ಪೆಷಲ್ ಗೌರ್ನಮೆಂಟ್ ಆರ್ಡರ್ ಹೊರಡಿಸಲಿಕ್ಕೆ ಲಾ ಡಿಪಾರ್ಟ್‌ಮೆಂಟ್‌ನವರ ಜೊತೆಯಲ್ಲಿ ನಮ್ಮ ಇಲಾಖೆಯವರು ಸಾಧ್ಯ ಸಾಧ್ಯತೆಗಳ ಬಗ್ಗೆ ವಿಚಾರ ಮಾಡಿ ಮಾತುಕತೆಯಾಗುತ್ತಿದೆ. ಖಾಯಂ ಮಾಡಿದ ತಕ್ಷಣ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಇಷ್ಟು ದೂರ ಹೋಗಿರುವುದಕ್ಕೆ ನೀವು ಸರ್ಕಾರದ ಬೆನ್ನು ತಟ್ಟಬೇಕಾಗಿದೆ. ಎನ್. ಎಂ. ಆರ್. ನಲ್ಲಿ ಕೆಲಸಮಾಡತಕ್ಕ ಇವರಿಗೆ ಅಧಿಕಾರಿಗಳಿಂದ ಆಗುತ್ತಿದ್ದ ಕಿರುಕುಳವನ್ನು ತಪ್ಪಿಸ ಬೇಕೆಂದು ಈ ಕೆಲಸ ಮಾಡಿದ್ದೇವೆ. ಎನ್. ಎಂ. ಆರ್. ನಲ್ಲಿ ಕೆಲಸ ಮಾಡತಕ್ಕವರಿಗೆ ಬಿಲ್ ಮಾಡ ಬೇಕಾದರೆ ಹಣ ತೆಗೆದುಕೊಳ್ಳುತ್ತಿದ್ದರು. ಸೌಡಿಗಳನ್ನು ಖಾಯಂ ಮಾಡತಕ್ಕ ಕೆಲಸಮುಂದುವರಿದಿದೆ. ೨೬೦ ಎಕರೆಗೆ ಒಬ್ಬ ಸೌಡಿ ಇರಬೇಕೆಂದು ೨೫ ಸಾವಿರ ಜನರನ್ನು ಖಾಯಂ ಮಾಡತಕ್ಕ ವ್ಯವಸ್ಥೆಯಾಗುತ್ತದೆ. ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚುಮಾಡಿಕೊಂಡು ಆಮೇಲೆ ನೋಡೋಣ. ನಾವು ಮಾಡಿರುವ ಕೆಲಸಕ್ಕೆ ನೀವು ಸಮಾಧಾನ ಪಟ್ಟುಕೊಳ್ಳಬೇಕಾಗುತ್ತದೆ. ಈಗ ಖಾಯಂ ಮಾಡಿರತಕ್ಕವರಿಗೆ ೧೦ ದಿವಸ ರಜ, ಟರ್ಮಿನಲ್ ಬೆನಿಫಿಟ್ ದೊರೆಯುತ್ತದೆ.

ಅಧ್ಯಕ್ಷರು.—ಪ್ರಶ್ನೆ ನಂ. ೩೫೭(೧೯೬೬) ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಬಸಪ್ಪ ದಿವಟರ್ ಸದಸ್ಯರು ಗೈರುಹಾಜರಾಗಿರುವರು.